**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂ: DTE-ADMIOSCH2/6/2022

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-560 001.
ದಿನಾಂಕ: 09-11-2022.

**-:: ಸುತ್ತೋಲೆ ::-**

**ವಿಷಯ :** **2022-23ನೇ** ಸಾಲಿಗೆ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳು ಪ್ರಿಮೆಟ್ರಿಕ್-ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ :**
1. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಶಾಖೆಯ ಇ-ಮೇಲ್ ದಿನಾಂಕ: 04-11-2022.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ/218/ಟಿಪಿಇ/99, ದಿನಾಂಕ: 27/01/2001.

**-0000000-**

ತಾಂತ್ರಿಕ ಶಿಕ್ಷಣ ಇಲಾಖೆಯ ಒಳಪಡುವ 06 ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಯ 08ನೇ, 09ನೇ ಮತ್ತು 10ನೇ ತರಗತಿಗಳಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಎಲ್ಲಾ ವರ್ಗದ ವಿದ್ಯಾರ್ಥಿಗಳ ಪ್ರಗತಿ, ನಡತೆ ಮತ್ತು ತರಗತಿ ಹಾಜರಾತಿ ತೃಪ್ತಿಕರವಾಗಿರುವ ಷರತ್ತಿಗೆ ಒಳಪಟ್ಟಂತೆ, ಉಲ್ಲೇಖ(2)ರ ಸರ್ಕಾರಿ ಆದೇಶದಂತೆ ಶಿಷ್ಯವೇತನ (ಸ್ಟೈಫಂಡ್) ಅನ್ನು ಮಂಜೂರು ಮಾಡಲಾಗುತ್ತಿದೆ. ಅದರಂತೆ 2022-23ನೇ ಸಾಲಿಗೂ ಸಹ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಯಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಅವರ ಅಧಾರ್ ಸಂಖ್ಯೆಯನ್ನು ಜೋಡಣೆ ಮಾಡಿಸಿರುವ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಎಸ್.ಎಸ್.ಪಿ/ಡಿ.ಬಿ.ಟಿ ಮುಖಾಂತರ ಶಿಷ್ಯವೇತನವನ್ನು ನೀಡಬೇಕಾಗಿರುವುದರಿಂದ ಕಡ್ಡಾಯವಾಗಿ ಎಲ್ಲಾ ವರ್ಗದ ವಿದ್ಯಾರ್ಥಿಗಳು **ಪ್ರಿಮೆಟ್ರಿಕ್-ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ(Prematic State Scholarship Portal)ದ ಲಿಂಕ್ https://ssp.karnataka.gov.in/** ರಲ್ಲಿ ನೋಂದಣಿ ಮಾಡಿಸಿಕೊಂಡು, ವಿದ್ಯಾರ್ಥಿವೇತನದ ವಿವಿಧ ಯೋಜನೆಗೆ ಸಂಪೂರ್ಣವಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಮಾತ್ರ ಇಲಾಖಾವತಿಯಿಂದ ನೀಡುವ ಶಿಷ್ಯವೇತನಕ್ಕೆ ಅರ್ಹ ಇರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಫೋನ್ ಸಂಖ್ಯೆ: 080-22356949ಕ್ಕೆ ಸಂರ್ಪಕಿಸಬಹುದಾಗಿದೆ.

ಕರಡು ಮಾನ್ಯ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ

**ಸಹಾಯಕ ನಿರ್ದೇಶಕರು (ಎಂಪಿಸಿ)** 9/11/22

ಇವರಿಗೆ,

ಪ್ರಿನ್ಸಿಪಾಲರು,
ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಹುಬ್ಬಳ್ಳಿ, ಭದ್ರಾವತಿ, ಬಳ್ಳಾರಿ, ಬಾಗಲಕೋಟೆ, ಕಲಬುರಗಿ ಮತ್ತು ಮಂಗಳೂರು - ಇವರ ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ,

ಇ-ಆಡಳಿತ ವಿಭಾಗಕ್ಕೆ - ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.